**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಐವನ್ ಡಿಸೋಜಾ, ಶಾಸಕರು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರಿಸುವ ಬಗ್ಗೆ.**

**ವಿಷಯ:**

ಮಂಗಳೂರು ನಗರದಲ್ಲಿ ಸುಮಾರು 8 ಸಾವಿರಕ್ಕೂ ಅಧಿಕ ಆಟೋರಿಕ್ಷಾ ಸಂಚರಿಸುತ್ತಿದ್ದು. ಅವುಗಳು ರಹದಾರಿ ಮತ್ತು ಪರವಾನಿಗೆ ಪಡೆದು ಕಾರ್ಯನಿರ್ವಹಿಸುತ್ತಿದೆ. ಇತ್ತೀಚಿಗೆ ಬ್ಯಾಟರಿ ಚಾಲಿತ ರಿಕ್ಷಾಗಳು ಮಾರುಕಟ್ಟೆಗೆ ಬಂದ ನಂತರ ಪರ್ಮಿಟ್ ನಿಯಮವಿಲ್ಲದೇ ನಿಲ್ದಾಣವಿಲ್ಲದೇ ಎಲ್ಲಿ ಬೇಕಾದರೂ ತೆರಳಿ ಬಾಡಿಗೆ ಮಾಡಬಹುದು ಎಂಬ ನಿಯಮದಡಿಯಲ್ಲಿ ಸಂಚರಿಸುತ್ತಿದ್ದು, ಪರ್ಮಿಟ್ ಪಡೆದು ಸಾರಿಗೆ ನಿಯಮಗಳನ್ನು ಪಾಲಿಸಿ, ನಿಯಮ ನಿಲ್ದಾಣ ಪಾಲಿಸಿ, ಬಾಡಿಗೆ ಮಾಡುತ್ತಿರುವ ರಿಕ್ಷಾ ಚಾಲಕರಿಗೆ ತೊಂದರೆ ಉಂಟಾಗಿ ಗೊಂದಲ ಪರಿಸ್ಥಿತಿ ಉಂಟಾಗಿದೆ. ಈ ಬಗ್ಗೆ ಆಟೋ ರಿಕ್ಷಾ ಚಾಲಕರ ಸಂಘಟನೆ ಪ್ರತಿಭಟನೆ ನಡೆಸುತ್ತಿದ್ದು, ಪರ್ಮಿಟ್ ರಿಕ್ಷಾದಾರರಿಗೆ ಬಾಡಿಗೆ ಇಲ್ಲದೇ ಕುಟುಂಬದ ನಿರ್ವಹಣೆಗೆ ತೊಂದರೆ ಉಂಟಾಗಿದೆ ಎಂದು ಪ್ರತಿಭಟಿಸುತ್ತಿದ್ದಾರೆ.

ಪರವಾನಿಗೆ ಇಲ್ಲದೇ ರಿಕ್ಷಾ ಚಾಲನೆ ಎಲ್ಲಿ ಬೇಕಾದರೂ ಮಾಡಬಹುದು ಎಂಬ ಬ್ಯಾಟರಿ ರಿಕ್ಷಾಗಳ ನಿಯಮದಿಂದ ಮಂಗಳೂರು ನಗರದಲ್ಲಿ ಜಿಲ್ಲೆಯ ಎಲ್ಲಾ ಕಡೆಗಳಿಂದ ನಗರಕ್ಕೆ ಬಂದು ರಿಕ್ಷಾ ನಿಲ್ದಾಣಗಳೇ ಇಲ್ಲದೇ ಓಡಾಡುವ ಪರಿಸ್ಥಿತಿ ನಿರ್ಮಾಣಗೊಂಡು ನಗರದಲ್ಲಿ ಸಂಚಾರ ಅವ್ಯವಸ್ಥೆ ಉಂಟಾಗಿದೆ. ಜನಸಾಮಾನ್ಯರಿಗೆ ರಿಕ್ಷಾ ಚಾಲಕರಿಗೆ ಪೈಪೋಟಿಯಿಂದ ತೊಂದರೆ ಉಂಟಾಗಿದೆ.

ಕೇಂದ್ರ ಸರ್ಕಾರದ ಪರವಾನಿಗೆ ಇಲ್ಲದೇ ಎಲೆಕ್ಟ್ರಿಕಲ್ (ಬ್ಯಾಟರಿ) ಚಾಲಿತ ಆಟೋರಿಕ್ಷಾಗಳಿಗೆ ನೀಡಿರುವ ವಿನಾಯಿತಿ ಕ್ರಮಕ್ಕೆ ತಮಿಳುನಾಡು ಮತ್ತು ದೆಹಲಿ ಸರ್ಕಾರಗಳು ನಿಯಮಗಳನ್ನು ರೂಪಿಸಿ, ಎಲೆಕ್ಟ್ರಿಕಲ್ (ಬ್ಯಾಟರಿ) ಚಾಲಿತ ಆಟೋರಿಕ್ಷಾಗಳು ನಿಯಂತ್ರಣಗೊಳಿಸಲು ಮತ್ತು ನಿಯಮ ರೂಪಿಸಿ ಎಲೆಕ್ಟ್ರಿಕಲ್ (ಬ್ಯಾಟರಿ) ಚಾಲಿತ ಆಟೋರಿಕ್ಷಾಗಳನ್ನು ಪ್ರಸ್ತುತ ಇರುವ ಆಟೋರಿಕ್ಷಾಗಳ ನಿಯಮದಲ್ಲಿಯೇ ಕಾರ್ಯಾಚರಣೆ ಮಾಡುವಂತೆ ನಿಯಮಗಳನ್ನು ರೂಪಿಸಿದೆ. ಅದರ ಪ್ರತಿಯನ್ನು ಲಗತ್ತಿಕರಿಸಿದ್ದೇನೆ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಬ್ಯಾಟರಿ ಚಾಲಿತ ಆಟೋರಿಕ್ಷಾಗಳಿಗೆ ಪರವಾನಿಗೆಯನ್ನು ಕಡ್ಡಾಯಗೊಳಿಸಬೇಕು. ಇದೊಂದು ಸಾರ್ವಜನಿಕರ ಮಹತ್ವವುಳ್ಳ ವಿಚಾರವಾಗಿರುವುದರಿಂದ ಈ ಬಗ್ಗೆ ನಿಯಮವನ್ನು ತಿದ್ದುಪಡಿಮಾಡಿ, ರಾಜ್ಯದ ಇತರೆ ರಿಕ್ಷಾ ಚಾಲಕರಿಗೆ ಇರುವ ನಿಯಮದಂತೆ ಬ್ಯಾಟರಿ ಚಾಲಿತ ಆಟೋರಿಕ್ಷಾಗಳಿಗೂ ಪರ್ಮಿಟ್ ಕಡ್ಡಾಯಗೊಳಿಸಿ ನಿಯಮವನ್ನು ಜಾರಿಗೆ ತರಬೇಕೆಂದು ಈ ವಿಷಯವನ್ನು ಸದನದ ಮೂಲಕ ಶೂನ್ಯ ವೇಳೆಯಲ್ಲಿ ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ತರಲು ಬಯಸುತ್ತೇನೆ.

**ಉತ್ತರ:**

ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: S.O 5333 (E), ದಿನಾಂಕ:18-10-2018ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3)(ಎನ್)ರಲ್ಲಿ ಪ್ರದತ್ತವಾದ ಅಧಿಕಾರದಡಿ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಸಂಚರಿಸುವ ಸಾರಿಗೆ ವಾಹನಗಳು ಹಾಗೂ ಬ್ಯಾಟರಿ ಆಧಾರಿತ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1) ರಹದಾರಿ ವಿನಾಯತಿ ನೀಡಿ ಆದೇಶವನ್ನು ಹೊರಡಿಸಲಾಗಿರುತ್ತದೆ ಹಾಗೂ ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: GSR 525 (E), ದಿನಾಂಕ: 02-08-2021ರಲ್ಲಿ ಬ್ಯಾಟರಿ ಆಧಾರಿತ ವಾಹನಗಳಿಗೆ ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ, ನಿಯಮ 81ರಲ್ಲಿ ನಿಗಧಿಪಡಿಸಿರುವ ನೋಂದಣಿ ಶುಲ್ಕದಿಂದ ವಿನಾಯತಿ ನೀಡಿ ಆದೇಶ ಹೊರಡಿಸಲಾಗಿರುತ್ತದೆ.

ಮುಂದುವರೆದು, ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 2 ಟಿಡಿಓ 2019, ದಿನಾಂಕ:20-01-2022ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3)(ಎನ್)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1) ರಹದಾರಿ ವಿನಾಯತಿ ನೀಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಆಟೋರಿಕ್ಷಾ ಚಾಲಕ ಮಾಲಕರ ಸಂಘಗಳ ಒಕ್ಕೂಟ, ಮಂಗಳೂರು ರವರ ಮನವಿ ಪತ್ರ ದಿನಾಂಕ: 22-02-2024ರಲ್ಲಿ ನೆರೆಯ ರಾಜ್ಯದಲ್ಲಿ ಬ್ಯಾಟರಿ ಚಾಲಿತ ಸಾರಿಗೆ ವಾಹನಗಳಿಗೆ ಶುಲ್ಕ ರಹಿತ ರಹದಾರಿಯನ್ನು ಕಡ್ಡಾಯಗೊಳಿಸಿದ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿನ ಬ್ಯಾಟರಿ ಚಾಲಿತ ಆಟೋರಿಕ್ಷಾಗಳಿಗೆ ಪರವಾನಿಗೆಯನ್ನು ಕಡ್ಡಾಯಗೊಳಿಸಲು ಕೋರಿರುತ್ತಾರೆ.

ರಾಜ್ಯ ಸರ್ಕಾರದ ಅಧಿಸೂಚನೆಯಿಂದ ಬ್ಯಾಟರಿ ಚಾಲಿತ ವಾಹನಗಳು, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಸಂಚರಿಸುವ ಸಾರಿಗೆ ವಾಹನಗಳ ನಿಯಂತ್ರಣ ಹಾಗೂ ವಾಹನಗಳ ಮೇಲೆ ನಿಗಾವಹಿಸಲು ತೊಂದರೆಯಾಗುತ್ತಿದ್ದು, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಲ್ಲಿ ಅದರ ವಿರುದ್ಧ ಮೋಟಾರು ವಾಹನಗಳ ಕಾಯ್ದೆ ಮತ್ತು ಅದರಡಿ ರಚಿತವಾದ ನಿಯಮಗಳನ್ವಯ ಕ್ರಮ ಕೈಗೊಳ್ಳಲು ಕಷ್ಟಸಾಧ್ಯವಾಗುವುದಲ್ಲದೆ, ಇತರೆ ಇಂಧನದಿಂದ ಸಂಚರಿಸುವ ವಾಹನಗಳ ಮಾಲೀಕರು/ಚಾಲಕರುಗಳ ನಡುವೆ ತಾರತಮ್ಯತೆ ಉಂಟಾಗುವುದರಿಂದ ಅನಿರೀಕ್ಷಿತ ಅನಾರೋಗ್ಯಕರ ಸ್ಪರ್ಧೆ ಉಂಟಾಗುವ ಸಾಧ್ಯತೆಗಳು ಹೆಚ್ಚಾಗುವುದು ಸಹ ಕಂಡುಬಂದಿರುತ್ತದೆ.

ಈ ಮೇಲ್ಕಂಡ ಅಂಶಗಳಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 2 ಟಿಡಿಓ 2019, ದಿನಾಂಕ: 20-01-2022 ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 66(3) (ಎನ್) ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಸದರಿ ಕಾಯ್ದೆ ಕಲಂ 66(1) ರಡಿ ರಹದಾರಿ ವಿನಾಯಿತಿ ನೀಡಿರುವ ಆದೇಶವನ್ನು ಹಿಂಪಡೆದು ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 66(3)(ಎನ್) ಮತ್ತು ಕಲಂ 96 (xxxiii) ರಲ್ಲಿ ಪ್ರದತ್ತವಾದ ಅಧಿಕಾರದಡಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಸಂಬಂಧಪಟ್ಟ ರಹದಾರಿಯನ್ನು ಶುಲ್ಕ ರಹಿತವಾಗಿ ಮಂಜೂರು ಮಾಡುವ ಕುರಿತಂತೆ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಟಿಡಿ 25 ಟಿಡಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.